ದಿನಾಂಕ: ಫೆಬ್ರವರಿ ೦೮, ೨೦೧೪

## ಅಗಸ್ಟಾ ವ್ಯಸ್ಟ್‌ಲ್ಯಾಂಡ್ ಕುರಿತು ರಾಜ್ಯ ಸಭೆಯಲ್ಲಿ ರಕ್ಷಣಾ ಸಚಿವರ ಹೇಳಿಕೆ

-ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಫೆಬ್ರವರಿ ೫, ೨೦೧೪ರಂದು ರಕ್ಷಣಾ ಸಚಿವರಾದ ಶ್ರೀ ಎ ಕೆ ಆಂಥೋಣಿ ಅವರು ರಾಜ್ಯ ಸಭಾದಲ್ಲಿ ಸ್ವಯಂಪ್ರೇರಿತ ಹೇಳಿಕೆ ನೀಡಿದ್ದರು. ಇಟಲಿ ರಾಷ್ಟ್ರದ ಸಂಬಂಧಪಟ್ಟ ನ್ಯಾಯಾಲಯಕ್ಕೆ ಫಿರಿಯಾದಿ ಸಲ್ಲಿಸಿದ್ದ ದಾಖಲಾತಿಗಳನ್ನು ಆಧರಿಸಿ ಪ್ರಕಟಗೊಂಡ ಮಾಧ್ಯಮ ವರದಿಗಳ ಕುರಿತು ಅವರು ಈ ಹೇಳಿಕೆ ನೀಡಿದ್ದರು. ಶ್ರೀ ಗೈಡೊ ಹ್ಯಾಸ್‌ಕೆ ಎಂಬಾತನಿಂದ ವಶಪಡಿಸಿಕೊಂಡ ಮಹತ್ವದ ದಾಖಲೆಯಲ್ಲಿ ಎರಡು ಪ್ರಮುಖ ಹೇಳಿಕೆ ಇದ್ದವು ಎಂದು ರಕ್ಷಣಾ ಖಾತೆ ಸಚಿವರು ತಿಳಿಸಿದ್ದಾರೆ. "ಫ್ಯಾಮ್" ಎಂಬ ಪದದ ಅರ್ಥ ಫ್ಯಾಮಿಲಿ ಎಂದು ಹಾಗೂ ಇದು ತ್ಯಾಗಿ ಕುಟುಂಬಕ್ಕೆ ಬಳಸಿದ ಪದವೆಂದು ನಂಬಲಾಗಿದೆ. ಆದರೆ "ಎಪಿ" ಎಂಬ ಶಬ್ದದ ವ್ಯಕ್ತಿ ಯಾರು ಎಂದು ಅವರಿಗೆ ತಿಳಿದಿಲ್ಲವೆಂದು ಹೇಳಿಕೆ ನೀಡಿದ್ದಾರೆ. ಶ್ರೀ ಕ್ರಿಸ್ಟಿಯನ್ ಮಿಚೆಲ್ ಎಂಬಾತನಿಂದ ದೊರೆತ ಮತ್ತೊಂದು ದಾಖಲೆಯಲ್ಲಿ ಕೆಲವಾರು ಭಾರತೀಯ ನಾಯಕರ ಹೆಸರುಗಳು ನಮೂದಿಸ್ವಟ್ಟಿವೆ ಎಂದೂ ಅವರು ಹೇಳಿದ್ದಾರೆ.

ಸಚಿವರಿಂದ ಈ ಕುರಿತು ಸ್ಪಷ್ಟೀಕರಣ ಕೇಳಬೇಕು ಎಂದರೂ, ಸದನದಲ್ಲಿ ನಡೆದಿರುವ ಗದ್ದಲದಿಂದ ಅದು ಸಾಧ್ಯವಾಗುವುದೆ ಎಂಬ ಸಂದೇಹ ನನಗಿದೆ. ನನ್ನ ಸಂದೇಹಗಳನ್ನು ಈಗ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ರಕ್ಷಣಾ ಖಾತೆ ಸಚಿವರು ಇದಕ್ಕೆ ಸ್ಪಷ್ಟನೆ ನೀಡಬೇಕೆಂಬ ಬೇಡಿಕೆ ನನ್ನದು.

ಇಟಲಿಯ ಮಧ್ಯವರ್ತಿಯಿಂದ ಮಾರ್ಚ್ ೧೫,೨೦೦೮ ದಿನಾಂಕದ ದಾಖಲಾತಿಯನ್ನು ವಶ ಪಡಿಸಿಕೊಳ್ಳಲಾಯಿತು. ಭಾರತದ ಕುರಿತು ಇಟಲಿಯ ಮಧ್ಯವರ್ತಿ ಹೊಂದಿದ ಆಲೋಚನೆಗಳು ಹೇಗಿದೆ ಎಂದು ಈ ದಾಖಲಾತಿಯಿಂದ ತಿಳಿದುಬರುತ್ತವೆ. ಆದರ ಪ್ರಕಾರ, "ಶ್ರೀಮತಿ ಗಾಂಧಿಯವರು ವಿಐಪಿ ಖರೀದಿಯ ಹಿಂದಿರುವ ಸಂಚಲನ ಶಕ್ತಿ, ಅವರು ಇನ್ನು ಮುಂದೆ ಎಂಐ-೮ರಲ್ಲಿ ವಾಯುಯಾನ ಮಾಡುವುದಿಲ್ಲ. ಈ ದಾಖಲೆಯಲ್ಲಿ ವಿವಿಧ ಸಚಿವರು ಹಾಗೂ ಶ್ರೀಮತಿ ಗಾಂಧಿಯವರಿಗೆ ನಿಕಟರಾದ ಪಕ್ಷದ ಪದಾಧಿಕಾರಿಗಳ ಪಟ್ಟಿಯೂ ಇದೆ."

ಪ್ರತ್ಯೇಕವಾಗಿ ವಶ ಪಡಿಸಿಕೊಂಡ ಲೆಖ್ಖಪತ್ರಗಳ ಹಾಳೆಯಲ್ಲಿ 'ರಾಜಕೀಯ' ಎಂಬ ಶೀರ್ಷಿಕೆಯಡಿ "ಎಪಿ" ಎಂಬ ಅಂಕಿತವಿದೆ. ಅದರ ಮುಂದಿನ ಷರದಲ್ಲಿ "ಎಫ್‌ಎಎಂ" ಎಂದು ಬರೆಯಲಾಗಿದ್ದು ಅದರ ಅರ್ಥ ಫ್ಯಾಮಿಲಿ ಎಂದು ಈಗಾಗಲೆ ಒಪ್ಪಿಕೊಳ್ಳಲಾಗಿದೆ.

ಈಗಾಗಲೆ ಒಪ್ಪಿರುವಂತೆ, ಈ ವ್ಯವಹಾರದಲ್ಲಿ ಲಂಚ ಕೈಬದಲಾಯಿಸಿದೆ ಹಾಗೂ ಭಾರತೀಯ ವ್ಯವಸ್ಥೆಯನ್ನು ಬೇಧಿಸಲಾಗಿದೆ. ಆದ್ದರಿಂದಲೇ ಗುತ್ತಿಗೆ ರದ್ದುಪಡಿಸಲಾಗಿದೆ. ಇದೇ ರೀತಿ ೧೯೮೭ರಲ್ಲಿ ಸ್ವಿಡನ್‌ನಲ್ಲಿ ವಶ ಪಡಿಸಿಕೊಂಡ ಮಾರ್ಟಿನ್ ಅರ್ಡ್‌ಬೋ ಅವರ ದಿನಚರಿ ಮಸ್ತಕದಲ್ಲಿಯೂ 'ಕ್ಯೂ' ಅಕ್ಷರ ಉಲ್ಲೇಖವಾಗಿತ್ತು. ತದನಂತರ ಕ್ಯೂ ಅಕ್ಷರದ ವ್ಯಕ್ತಿಯಾರು ಎಂದು ಸ್ಪಷ್ಟವಾಯಿತು. ಟಿಪ್ಪಣಿಯಲ್ಲಿ ಬರೆದ ಅಂಕಿತಗಳ ಹಿಂದಿರುವ ವ್ಯಕ್ತಿಗಳು ಯಾರು ಎಂದು ರಾಜಕೀಯ ವಲಯದಲ್ಲಿ ಪತ್ತೆಹಚ್ಚುವುದು ರಾಕೆಟ್ ವಿಜ್ಞಾನವಲ್ಲ. ಮಧ್ಯವರ್ತಿಗಳನ್ನು ಕುಟುಂಬವೆಂದು ಸಂಬೋಧಿಸಬಹುದೇ ಎಂದು ನಂಬಲು ಅಸಾಧ್ಯವಾಗಿದೆ.

ಕೆಲವು ಪದಗಳಿಗೆ ಸ್ವಾಭಾವಿಕವಾಗಿ ನಿರ್ದಿಷ್ಟ ಅರ್ಥವಿರುತ್ತದೆ. ಭಾರತದಲ್ಲಿ 'ಕುಟುಂಬ' ಎಂಬ ಪದಕ್ಕೆ ಬೇರೆ ಅರ್ಥ ಕಲ್ಪಿಸುವ ಆವಶ್ಯಕತೆ ಏನಿದೆ?

*****